**OS No:20/2021**
**PW:1**

(ಇಂದು ದಿನಾಂಕಃ **28-01-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದಃ**

ನನ್ನ ತಾಯಿ ಮೃತಪಟ್ಟು 15 ವರ್ಷ ಆಗಿರುತ್ತದೆ. ನನಗೆ ಒಬ್ಬ ನಾಗವ್ವ ಗಂಡ ಬಸಪ್ಪ ಕಿತ್ತೂರ, ಮಲ್ಲವ್ವ ಗಂಡ ಮಲ್ಲಪ್ಪಗೌಡ ವೆಂಕನಗೌಡರ ಹಾಗೂ ಮಹಾದೇವಿ ಶೇಖಪ್ಪ ಪೂಜಾರ ರವರ ಪರಿಚಯ ಇಲ್ಲ. 1 ನೇ ಪ್ರತಿವಾದಿ ನನ್ನ ಅಕ್ಕ. ಸದರಿಯವರು ಈಗ ಜಿವಂತ ಇದ್ದಾರೆ ಎಂದರೆ ಸರಿ. ಸದರಿ ಮೇಲ ಹೇಳಿದ ಮೂರು ಜನ 1 ನೇ ಪ್ರತಿವಾದಿಯ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 43/1 ಹೊಂಗಲ ಹದ್ದಿನಲ್ಲಿ ಬರುತ್ತದೆ. ಇನ್ನೊಂದು ಸರ್ವೆ ನಂಬರ 42/2 ಅ ಇದು ಮೊರಬ ಹದ್ದಿನಲ್ಲಿ ಬರುತ್ತದೆ. ಸದರಿ ಜಮೀನುಗಳಿಗೆ ಸಂಭಂದಿಸಿ ನನ್ನ ತಾಯಿ ಪಕ್ಕಿರವ್ವ ರವರು 1986 ರಲ್ಲಿ ನೊಂದಾಯಿತು ಮೃತ್ಯೂ ಪತ್ರದ ಪ್ರಕಾರ 2 ರಿಂದ 4 ಪ್ರತಿವಾದಿಯರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯೂ ಪತ್ರದ ಪ್ರಕಾರ 1986 ರಲ್ಲಿ 2 ರಿಂದ 4 ನೇ ಪ್ರತಿವಾದಿಯರ ಹೆಸರು ಸದರಿ ಜಮೀನುಗಳ ದಾಖಲೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಸದರಿ ವರ್ಗಾವಣೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸ್ಸಿದರ ಬಗ್ಗೆ ನನಗೆ ಗೊತ್ತಿಲ್ಲ. ದಾವೆ ದಾಖಲಿಸುವ ಸಮಯಕ್ಕೆ ಜಮೀನು ಸರ್ವೆ ನಂಬರ 43/1, 42/2 ಅ ಇವುಗಳು ನನ್ನ, ನನ್ನ ತಾಯಿ ಹಾಗೂ ನನ್ನ ಸಹೋದರಿ ಬಸವ್ವ ರವರ ಹೆಸರಿನಲ್ಲಿ ಇತ್ತು.

2. ಜಮೀನು ಸರ್ವೆ ನಂಬರ 319/1 ಅ/1 ದರ ಒಟ್ಟು ಕ್ಷೇತ್ರ 10 ಎಕರೆ. ಸದರಿ ಜಮೀನು ದಾವೆ ಸಲ್ಲಿಸುವ ಕಾಲಕ್ಕೆ ಯಾರು ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಜಮೀನಿನ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂಬರ 43/1 ಇದರ ಒಟ್ಟು ಕ್ಷೇತ್ರ 10 ಎಕರೆ ಇರುತ್ತದೆ. ಸದರಿ ಜಮೀನಿನಲ್ಲಿ ಎಷ್ಟು ಭಾಗಗಳಾಗಿರುತ್ತವೆ ಎಂದು ಹೇಳಲು ಆಗುವುದಿಲ್ಲ. ನನಗೆ ಗೌಡಪ್ಪ ಬಸಪ್ಪ ಮಲ್ಲನಗೌಡರ ರವರು ಪರಿಚಯ ಇಲ್ಲ. ಅದೇ ರೀತಿ ಬಸಪ್ಪ ಅಲಿಯಾಸ ಬಸನಗೌಡ ಶಂಕರಗೌಡ ಮಲ್ಲನಗೌಡರ ರವರ ಪರಿಚಯ ಇಲ್ಲ. ಸದರಿ ಜಮೀನು ಸರ್ವೆ ನಂಬರ 43/1 ಈಗ 5 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಚಕ್ಕಬಂದಿ ಹೇಳಲು ಆಗುವುದಿಲ್ಲ.

ಸದರಿಯವರಿಗೆ ಸದರಿ ಜಮೀನು ನೊಂದಾಯಿತ ದಾನ ಪತ್ರದ ಮುಖಾಂತರ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಸದರಿ ಜಮೀನಿನ ಮೇಲೆ ಬ್ಯಾಂಕನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿರೂರ ಗ್ರಾಮದಿಂದ ಸದರಿ ಜಮೀನು 8 ಕಿ. ಮಿ. ಅಂತರ ಇರುತ್ತದೆ. ಸದರಿ ಜಮೀನಿನಲ್ಲಿ 5 ನೇ ಪ್ರತಿವಾದಿ ಸಾಕಷ್ಟು ಹಣ ಖರ್ಚು ಮಾಡಿ ಅಭಿವೃದ್ಧಿ ಪಡಸಿ ನೀರಿನ ಹೊಂಡವನ್ನು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಪಾಲು ಇಲ್ಲ ಎಂದರೆ ಸರಿಯಲ್ಲ.

3. ನನ್ನ ತಾಯಿ ಶಿರೂರ ಗ್ರಾಮದಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ಗಂಡನ ಊರು ಕಬ್ಬಿನೂರ ಗ್ರಾಮ. ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**